


### ಮಾರ್ಗದರ್ಶಕ

‘ಇಂಟರ್‌ವ್ಯೂ ಎದುರಿಸುವುದು ಹೇಗೆ?’ ರಮೇಶ್ ಶೆಟ್ಟಿಗಾರ್ ಅವರ ಮುಖಪುಟ ಲೇಖನ (ಸುಧಾ, ಮಾರ್ಚ್ 22) ಉದ್ಯೋಗಾಕಾಂಕ್ಷಿಗಳಿಗೆ ಮಾರ್ಗದರ್ಶಕ ಮಾಹಿತಿಗಳನ್ನು ನೀಡಿದೆ. ಸಂಬಂಧಿಸಿದ ಚಿತ್ರಗಳೂ ಅತ್ಯಂತ ಸೂಕ್ತವಾಗಿವೆ.

—ನಾರಾಯಣ ಯಾಜಿ ಶಿರಾಲಿ, ಮುಕುಂದ ಹೆರಕಲ್ಲ ಕಲಬುರಗಿ, ಗಾಣಧಾಳು ರಾಮಣ್ಣ ಚಿತ್ರದುರ್ಗ

### ಸಂಗ್ರಹಯೋಗ್ಯ

ಲೇಖನ ಸವಿಸ್ತಾರವಾಗಿದ್ದು, ನೌಕರಿ ಆಕಾಂಕ್ಷೆಯ ಪ್ರತಿಯೊಬ್ಬರೂ ಸಂಗ್ರಹಿಸಿ ಇಟ್ಟುಕೊಂಡು ಸಮಯ ಬಂದಾಗ ಅದರ ಪ್ರಯೋಜನ ಪಡೆಯಲು ಉತ್ಸಕರಾಗಬೇಕು. ಲೇಖನ ಸಂಗ್ರಹಯೋಗ್ಯವಷ್ಟೇ ಅಲ್ಲದೇ ಪದೇ ಪದೇ ಮೆಲುಕು ಹಾಕಿ ಪ್ರಯೋಜನ ಪಡೆಯುವಂತಿದೆ.

—ಎ.ಕೆ. ಪಟ್ಟಾಭಿ ಬೆಂಗಳೂರು

### ಮೈನವಿರೇಳುತ್ತದೆ

‘ಮ್ಯಾಮತ್ ಕೇವ್’ (ರವಿರಾಜ ಹಾಲಂಬಿ) ಅವರ ಲೇಖನದ ವಿವರಣೆ ಓದುತ್ತಿದ್ದಂತೆ ಮೈನವಿರೇಳುತ್ತದೆ.

—ಕೋಟೇಶ್ವರ ಸೂರ್ಯನಾರಾಯಣ ರಾವ್ ಬೆಂಗಳೂರು, ಸುಂದರ್ ಬೆಂಗಳೂರು

### ಜೀವಜಾಲ

‘ನೀರು ಇಂಗಿಸಲು ಹೊಸ ದಾರಿ’ (ಯಶವಂತ ಕುಮಾರ್ ಎಚ್.ಪಿ.) ಲೇಖನ ಬೇಸಿಗೆಯ ದಿನಗಳಲ್ಲಿ ಜೀವಜಾಲವನ್ನು ಜೋಪಾನ ಮಾಡುವ ಅಗತ್ಯವನ್ನು ತಿಳಿಸಿಕೊಟ್ಟಿದೆ.

—ಎಚ್.ಆನಂದಕುಮಾರ್ ಚಿತ್ರದುರ್ಗ

### ರಾಣಿ ಬಾತ್

‘ಕನಕಗಿರಿಯ ರಾಣಿ ಬಾತ್’ (ಧರ್ಮಾನಂದ ಶಿರ್ವ) ಲೇಖನ ತುಂಬಾ ಹಿಡಿಸಿತು. ನನ್ನ ಮುಂದಿನ ಪ್ರವಾಸ ಈ ರಾಣಿ ಬಾತ್‌ಗೆ.

—ಎಚ್.ಆರ್. ದೇಸಾಯಿ ರಾಯಚೂರು, ಬಸಪ್ಪ ಯ.ಬಂಗಾರಿ ಧಾರವಾಡ, ಕೊ.ಸು.ನರಸಿಂಹ ಮೂರ್ತಿ ಮೈಸೂರು

### ಎಳೆಯರ ಕವಿತೆ

ಎಳೆಯ ಅಂಗಳ ವಿಭಾಗದಲ್ಲಿ ಮಕ್ಕಳ ಕವಿತೆ ‘ಗಿಡಗಳ ನೆಡುವೆ’ (ಡಾ. ಚನ್ನೇಶ ಹೊನ್ನಾಳಿ ) ಬಹಳ ಚೆನ್ನಾಗಿದೆ. ಲಕ್ಷ್ಮೀ ತಿಮ್ಮಪ್ಪ, ಶಿವಮೊಗ್ಗ ಇವರ ‘ಕಿಲಾಡಿ ಮೊಲ’ ಮಕ್ಕಳ ಕತೆ ಕೂಡ ನೀತಿ ಬೋಧಕವಾಗಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

### ನೂರ್ಕಾಲ ಬಾಳಲಿ



‘ಕನ್ನಡದಲ್ಲಿ ಬರೆದಿದ್ದರಿಂದ ಇಷ್ಟೆಲ್ಲ ಗೌರವ ಸಿಕ್ಕಿದೆ’ (ಬಿ.ಎಂ. ಹನೀಫ್) ಕೆ.ಎಸ್. ನಿಸಾರ್ ಅಹ್ಮದ್ ಅವರ ಸಂದರ್ಶನ ಆಧರಿತ ಲೇಖನ ಓದಿ ಅಭಿಮಾನ ಮೂಡಿತು. ನಿಸಾರ್‌ರ ಕವಿತೆಗಳು ಓದುವುದೇ ಒಂದು ಖುಷಿ. 83ರ ಇಳಿವಯಸ್ಸಲ್ಲೂ ಉತ್ಸಾಹಿ ಕವಿಯಾಗಿರುವ ನಿಸಾರರು ನೂರ್ಕಾಲ ಬಾಳಲಿ.

—ಬಿ.ಎಸ್. ರಮೇಶ್ ಬೆಂಗಳೂರು, ತೋರಗಲ್ಲ ಉಮೇಶ ರಾಮದುರ್ಗ, ಎಲ್.ಗಿರಿಜಾರಾಜ್ ಬೆಂಗಳೂರು, ಕೊಹಿಮ ಬಸರಕೋಡು, ಪಿ.ಜಯವಂತ ಪೈ ಕುಂದಾಪುರ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಸರ್ವಜಿತ ಹುಬ್ಬಳ್ಳಿ, ಸೀತಾ ಕೇಶವ ಸಿಡ್ಡಿ, ಸುಲೋಚನಾ ವಾದಿರಾಜ್ ಶಿವಮೊಗ್ಗ, ನೀಲಮ್ಮ ಕುಮಾರಪ್ಪ ಲಿಂಗಸಗೂರು, ಮೀನಾಕ್ಷಿ ಕೆ.ರಾಮಗುಂಡಿ ಬೈಲಹೊಂಗಲ, ಪ.ಚಂದ್ರಕುಮಾರ್ ಚಿತ್ರದುರ್ಗ, ಜಿ.ಎಸ್.ಸ್ವಾಮಿ ಬೆಂಗಳೂರು, ಭಾರತಿ ಸುಧೀಂದ್ರ ಬೆಂಗಳೂರು, ವಿಭಾ ಮುರಳೀಧರ ತುಮಕೂರು, ಶೋಭಾ ಮುಕುಂದ ಕಲಬುರಗಿ

### ಸ್ಫೂರ್ತಿ ನೀಡಿತು

ನಿಸಾರ್ ಅವರದು ತುಂಬ ಪಕ್ವವಾದ ಮನಸ್ಸು. 1978–80 ರ ವೇಳೆ ಎಸ್ .ದಿವಾಕರ್ ಅವರು ಮಲ್ಲಿಗೆ ಮಾಸಪತ್ರಿಕೆಯ ಸಂಪಾದಕರಾಗಿದ್ದಾಗ ರಾಜ್ಯಮಟ್ಟದ ಕಥಾಸ್ಪರ್ಧೆಯನ್ನು ಏರ್ಪಡಿಸುತ್ತಿದ್ದರು. ಆಗ ನನ್ನ ಕಥೆಯೊಂದು ಪ್ರಥಮ ಬಹುಮಾನ ಗಳಿಸಿತು. ಈ ಸ್ಪರ್ಧೆಯ ತೀರ್ಪುಗಾರರು ನಿಸಾರ್ ಆಗಿದ್ದರು. ಆಗ ನನ್ನ ಕಥೆಯ ಬಗ್ಗೆ ವ್ಯಕ್ತಪಡಿಸಿದ ಒಳ್ಳೆಯ ಅಭಿಪ್ರಾಯ ಮುಂದೆ ನಾನು ಎಷ್ಟೋ ಕಥೆ ಬರೆಯಲು ಸ್ಫೂರ್ತಿ ನೀಡಿತು.

— ಜಿ . ನಾರಾಯಣ ಬೆಂಗಳೂರು

### ನೆನಪಾದವು

ಲೇಖನವನ್ನು ಓದಿ ಶಿವಮೊಗ್ಗದ ‘ಸಹ್ಯಾದ್ರಿ ಕಾಲೇಜಿ’ನ ದಿನಗಳು ನೆನಪಾದುವು.

—ಪ್ರಭಾ ಪ್ರಸಾದ್ ಬೆಂಗಳೂರು

### ಸಿಹಿಯಾದ ನೆನಪು

ನಾನು ಬೆಂಗಳೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ನನಗೆ ನಿಸಾರ್ ಹಾಗೂ ಲಂಕೇಶ್ ಪ್ರಾಧ್ಯಾಪಕರಾಗಿದ್ದರು. ಒಮ್ಮೆ ಪದ್ಮನಾಭ ನಗರ ಬಸ್ ನಿಲ್ದಾಣದಲ್ಲಿ ನಿಸಾರ್ ಬಸ್‌ಗಾಗಿ ಕಾಯುತ್ತಿದ್ದರು. ನಾನು ಅವರನ್ನು ನೋಡಿ ನನ್ನ ಜೀಪ್‌ನಲ್ಲೇ ಅವರಿಗೆ ಕಾಲೇಜಿಗೆ ಡ್ರಾಪ್ ಕೊಟ್ಟಿದ್ದ ಸಿಹಿ ನೆನಪು ಇನ್ನೂ ಮನದಾಳದಲ್ಲಿದೆ.

—ಎಲ್. ಶ್ರೀನಿವಾಸಯ್ಯ ಬೆಂಗಳೂರು

### ಮತ್ತೊಮ್ಮೆ ಕೇಳಿದಂತಾಯಿತು

ನಿಸಾರ್ ಅವರ ಮಾತುಗಳು ಕೇಳುತ್ತಿದ್ದಂತೆ, ಸಹ್ಯಾದ್ರಿ ಕಾಲೇಜಿನಲ್ಲಿ ನಾನು ಓದುತ್ತಿದ್ದ ದಿನಗಳು, ಅವರ ಪಾಠ ಹಾಗೂ ಕಾಲೇಜಿನ ಪತ್ರಿಕೆಗೆ ಬರೆದ ಕವಿತೆಗಳನ್ನು ಮನೆಗೆ ಕರೆಸಿ ಅವುಗಳನ್ನು ತಿದ್ದಿ ಹೇಳುತ್ತಿದ್ದ ಅವರ ಮಾತುಗಳು ಮತ್ತೊಮ್ಮೆ ಕೇಳಿದಂತಾಯಿತು. ಕನ್ನಡ ಕವಿತೆಗಳನ್ನು ಬರೆಯುವ ಹುಡುಗರೆಂದರೆ ಬಹಳ ಅಚ್ಚುಮೆಚ್ಚು ಅವರಿಗೆ.

—ಮೇ.ಗೋ. ಸುಬ್ಬಣ್ಣ ಶಿವಮೊಗ್ಗ

